

# ಬೃಹತ್ ಕುರಾನ್!



ಇಸ್ಲಾಮಿಕ್ ಪವಿತ್ರ ಧರ್ಮಗ್ರಂಥ ಕುರಾನಿನ ವಿಶ್ವದ ಅತಿ ದೊಡ್ಡ ಆವೃತ್ತಿಯೆಂದು ಮನ್ನಣೆ ಪಡೆದಿದೆ ಈ ಬೃಹತ್ ಕುರಾನ್. ರಷ್ಯನ್ ಗಣರಾಜ್ಯದ ಖಜಾನದಲ್ಲಿರುವ ಕ್ಯೋಲ್ ಶರೀಫ್ ಮಸೀದಿಯ ಸಭಾಂಗಣದಲ್ಲಿ ಇದು ಕಾಣಲು ಸಿಗುತ್ತದೆ. ಜಗತ್ತಿನಲ್ಲಿ ಇಷ್ಟು ದೊಡ್ಡ ಕುರಾನ್ ಬೇರೆಡೆ ಮುದ್ರಣವಾಗಿಲ್ಲವೆಂದು 2012ರಲ್ಲಿ ಗಿನ್ನೆಸ್ ವಿಶ್ವ ದಾಖಲೆಯಲ್ಲಿಯೂ ಇದಕ್ಕೆ ಸ್ಥಾನ ನೀಡಲಾಗಿದೆ.

ಸ್ಕಾಟ್ಲೆಂಡ್ ಕಾಗದದಲ್ಲಿ ಮುದ್ರಣವಾಗಿರುವ ಈ ಬೃಹತ್ ಕುರಾನ್‌ನ ಪುಟಗಳು 120 ಸೆ.ಮೀ. ಅಗಲ ಹಾಗೂ 200 ಸೆ.ಮೀ. ಉದ್ದವಾಗಿವೆ. ರೇಷ್ಮೆ ಬಟ್ಟೆಯ ಪುಟಗಳೂ ಒಳಗಿವೆ. ಬಿಡಿಯಾಗಿ ಲೆಕ್ಕ ಹಾಕಿದರೆ 632 ಪುಟಗಳಿದ್ದರೂ ಪುಟಗಳನ್ನು ಸೇರಿಸಿ ಮಧ್ಯೆ ಹೊಲಿಯದ ಕಾರಣ ಹಾಳೆಗಳನ್ನು ಉದ್ದವಾಗಿ ಬಿಡಿಸಬಹುದು. ಆಗ ಗ್ರಂಥ ಎರಡು ಮೀಟರ್ ಉದ್ದವಾಗುತ್ತವೆ. ಪುಸ್ತಕದ ಭಾರ ಎಂಟುನೂರು ಕಿಲೋಗಳಷ್ಟಿದೆ.

ಈ ಧರ್ಮಗ್ರಂಥದ ರಕ್ಷಾಕವಚಗಳ ತೂಕವೇ ನೂರ ಇಪ್ಪತ್ತು ಕಿಲೋಗಳಷ್ಟಿದೆ. ಇದರ ವಿಶೇಷವೆಂದರೆ ಚಿನ್ನ ಮತ್ತು ಬೆಳ್ಳಿಯ ಎಳೆಗಳಿಂದಲೇ ಇದರ ರಚನೆಯಾಗಿದೆ. ವಜ್ರ ಮತ್ತು ಅಮೂಲ್ಯವಾದ ರತ್ನಗಳನ್ನು ರಕ್ಷಾಕವಚದಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ಕುರಾನ್ ಪುಸ್ತಕ ಕೋಟ್ಯಂತರ ರೂಪಾಯಿ ಬೆಲೆ ಬಾಳುತ್ತದೆ. ಇದು ದಾಖಲೆಯ ಗ್ರಂಥವಾಗಿಯೂ ಜಗತ್ತಿನಲ್ಲಿ ಹೆಸರಾಗಿದೆ.

■ ಪ.ರಾಮಕೃಷ್ಣ ಶಾಸ್ತ್ರಿ